೧೧. ನಮ್ಮ ಮುಂದಿರುವ ಆಯ್ಕೆ

'ಸುಸ್ಥಿರ ಸಮಾಜಕ್ಕಾಗಿ ಶಿಕ್ಷಣ' ಎಂಬ ಮಾತು ಸಂಪೂರ್ಣ ಸೋತಂತೆ ಕಾಣುತ್ತಿರುವ ಇಂದಿನ ಕಾಲದಲ್ಲಿ ನಾವು ಕೆಲವರಾದರೂ ಶಿಕ್ಷಣ ಸುಸ್ಥಿರ ಸಮಾಜಕ್ಕೆ ನಿಲ್ಲಬಲ್ಲ ಸಾಧ್ಯತೆಯನ್ನು ಜೀವಂತವಾಗಿಡಬೇಕು. ಜಾಗತೀಕರಣ ಸೃಷ್ಟಿಸಿರುವ ದುರಾಸೆಯೇ ಪ್ರಧಾನವಾದ ಜೀವನದೃಷ್ಟಿಯ ಕರಾಳ ರೂಪುಗಳು ಎದುರಿಗೆ ವಿಜೃಂಭಿಸುತ್ತಿದ್ದರೂ, ಪರಿಸರ ವಿಕೋಪಗಳು ಆಗಾಗ ಮನುಕುಲವನ್ನು ಎಚ್ಚರಿಸುತ್ತಿದ್ದರೂ ಬಹುಸಂಖ್ಯಾತರು ಎಚ್ಚರಗೊಂಡಿಲ್ಲ. ಏಕೆಂದರೆ ಭೂಮಿತಾಯಿ ತನ್ನ ಅಪರಿಮಿತ ಸಹಿಷ್ಣುತೆಯಿಂದ ಜೀವದಾಯಿನಿಯಾಗಿಯೇ ಉಳಿದಿದ್ದಾಳೆ. ಆದರೆ ತನ್ನ ಮೃತಸಂಜೀವಿನಿ ಶಕ್ತಿಯನ್ನು ಶೀಘ್ರಗತಿಯಲ್ಲಿ ಕಳೆದುಕೊಳ್ಳುತ್ತಿರುವ ಈಕೆ ಮನುಕುಲ ತನ್ನನ್ನೇ ತಾನು ಬದಲಿಸಿಕೊಳ್ಳಲು ಅಲ್ಪಕಾಲಾವಧಿಯನ್ನು ಕೊಟ್ಟಿದ್ದಾಳೆ.

ಈ ಎಲ್ಲಾ ಅವಘಡಗಳಿಗೂ ಮೂಲಕಾರಣ ಎಂದರೆ ಮನುಷ್ಯನ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡು ಸಾಧಿಸಲಾಗುತ್ತಿರುವ ಆರ್ಥಿಕ ಪ್ರಗತಿ. ಅಭಿವೃದ್ಧಿ ಎಂಬುದು ಆರ್ಥಿಕ ಪ್ರಗತಿಯ ಅಳತೆಗೋಲನ್ನಲದೆ ಬೇರಾವುದನ್ನೂ ಪರಿಗಣಿಸದೆ ಇರುವುದೇ ನಮ್ಮ ಎಲ್ಲ ದುರಂತಗಳಿಗೂ ಕಾರಣ. ಜಾಗತೀಕರಣ–ಇಂದಿನ ಶಿಕ್ಷಣ–ಅಭಿವೃದ್ಧಿ ಈ ಮೂರೂ ಪರಸ್ಪರ ಸಂಬಂಧ ಹೊಂದಿದ್ದು, ಏಕಪ್ರಕಾರದ ಜೀವನ ದೃಷ್ಟಿಯನ್ನು ಹುಟ್ಟುಹಾಕಿವೆ. ಈ ಜೀವನದೃಷ್ಟಿಯ ಹಿಂದೆ ಮನುಷ್ಯನ ದೌರ್ಬಲ್ಯಗಳನ್ನು ವೈಭವೀಕರಿಸಿ ಮನುಷ್ಯರನ್ನು ಸರಕುಸಂಸ್ಕೃತಿಯ ದಾಸ್ಯದಲ್ಲಿ ಮುಳುಗಿಸಿ ಲಾಭ ಗಳಿಸುವ ಉದ್ದೇಶವಿದೆ. ಇದು ಕೆಲವೇ ಕೆಲವು ಸ್ವಾರ್ಥಿಗಳ, ದುಷ್ಟರ ಸಾಂಸ್ಥಿಕ ಹುನ್ನಾರವಾದರೂ ತಮ್ಮ 'ದೌರ್ಬಲ್ಯ ಪ್ರೀತಿ' ಯಿಂದಾಗಿ ಇಡೀ ಮನುಕುಲ ಈ ವ್ಯಾಪಾರದಲ್ಲಿ ಪಾಲುದಾರವಾಗಿದೆ. ಮನುಷ್ಯನ ಮೌಲ್ಯಗಳು, ಜೀವನದೃಷ್ಟಿ ರೂಪುಗೊಳ್ಳುವ ಬಾಲ್ಯಾವಸ್ಥೆಯಲ್ಲಿ ನಾವು ಕೊಡುತ್ತಿರುವ ಶಾಲಾಶಿಕ್ಷಣ ದುರಂತಮಯ ಬದುಕಿಗೆ ಪೂರಕವಾಗಿದೆ. ಬಹುಸಂಖ್ಯಾತರ ಸರಾಸರಿ ಮನಸ್ಸಿಗೆ ನಿರ್ದಿಷ್ಟವಾದ ಆಯ್ಕೆ ಎಂಬುದು ಇರುವುದಿಲ್ಲ. ಅವರ ಆಯ್ಕೆ ಏನಿದ್ದರೂ ಬಹಳ ಜನ ಯಾವುದನ್ನು ಪುರಸ್ಕರಿಸುತ್ತಾರೋ ಅದು ಕ್ಷೇಮ ಎಂಬ ನಂಬಿಕೆಯ ಮೇಲೆ ಎಲ್ಲರೂ ಮಾಡುತ್ತಿರುವ ತಪ್ಪುಗಳನ್ನು ಚಾಚೂ ತಪ್ಪದೇ ಅನುಸರಿಸುತ್ತಾರೆ. ಇಂತಹ ಒಂದು ಸರಾಸರಿ ಮನಸ್ಸು ರೂಪುಗೊಳ್ಳಲು ಅಗತ್ಯವಾದ ಬುನಾದಿಯನ್ನು ನಮ್ಮ ಶಾಲಾಶಿಕ್ಷಣ ಬಾಲ್ಯದಲ್ಲೇ ಹಾಕಿಕೊಡುತ್ತಾ ಇದೆ.

ಪಂಚಭೂತಗಳನ್ನು ಸಂಪೂರ್ಣವಾಗಿ ಹತೋಟಿಗೆ ತರುವ ವಿದ್ಯೆಯನ್ನು ಕಲಿಸುವ ಮನೋವೈಜ್ಞಾನಿಕ ಪ್ರಧಾನವಾದ ಪಾಶ್ಚಾತ್ಯ ಶಿಕ್ಷಣ ಮಾದರಿಗಳು ನಮ್ಮ ಎದುರಿನಲ್ಲೇ ಇದೆ. ಈ ಶಿಕ್ಷಣವು ಮನುಷ್ಯನ ದೌರ್ಬಲ್ಯಗಳನ್ನು 'ನ್ಯಾಚುರಲ್' ಎನ್ನುತ್ತಾ ಈ ಭೂಮಿ–ಪಂಚಭೂತಗಳು ಇರುವುದೇ ಸುಖಜೀವನಕ್ಕಾಗಿ ಎಂಬಂತಹ ಜೀವನದೃಷ್ಟಿಯನ್ನು ನೀಡುತ್ತದೆ. ಕಣ್ಣಿಗೆ ಕಾಣದ ಅತೀತದ ಆದರ್ಶವನ್ನೇ ನಿತ್ಯಜೀವನದ ಹಾಸುಗಲ್ಲಾಗಿ ಮಾಡಿಕೊಂಡಿದ್ದ ಭಾರತೀಯ ಜೀವನವು ಒಪ್ಪೊತ್ತಿನ ಊಟವನ್ನೂ ನೀಡಲಾರದೆ ಸೋತುಹೋಗಿದೆ. ಹಾಗಾಗಿ ಇಂದಿನ ಭಾರತೀಯ ಮನಸ್ಸು ಪಾಶ್ಚಾತ್ಯ ಮಾದರಿಯ ಬದುಕಿಗೆ ಮಾರುಹೋಗಿದೆ. ಭೂಮಿಯನ್ನು ಹಸಿರಾಗಿ ಉಳಿಸಬಲ್ಲ ಶಿಕ್ಷಣದ ಸಿದ್ಧ ಮಾದರಿಯೊಂದು ನಮಗೆ ಎಲ್ಲೂ ಸಿಗುತ್ತಿಲ್ಲ. ಯೂರೋಪ್ ಮತ್ತು ಅಮೇರಿಕಾದ ಚಿಂತಕರೂ ಬದುಕಿನಿಂದ ದೂರಾಗುತ್ತಿರುವ ನಮ್ಮ ಇಂದಿನ ಶಿಕ್ಷಣ ಕುರಿತು ಚಿಂತಿಸಿಸುತ್ತಿದ್ದಾರೆ. ನಮ್ಮ ಮುಂದಿರುವ ಸವಾಲುಗಳು ಮುಖ್ಯವಾಗಿ ಎರಡು : ಭೂಮಿ ಹಸಿರಾಗಿಯೇ ಉಳಿಯುವಂತೆ ಮನುಕುಲ ಬದುಕು ಸಾಗಿಸಬೇಕು. ಇಂತಹ ಬದುಕನ್ನು ಸಾಧ್ಯವಾಗಿಸುವ ಜೀವನದೃಷ್ಟಿಯನ್ನು ಬಹುಸಂಖ್ಯಾತರಲ್ಲಿ ಮೂಡಿಸಬೇಕು ಮತ್ತು ಶಿಕ್ಷಣ ಇದನ್ನು ಸಾಧ್ಯ ಮಾಡಬೇಕು. ಬಹಳ ಹಿಂದೆಯೇ ಗಾಂಧೀಜಿಯವರು ಹೇಳಿರುವಂತೆ ಸರಳ ಜೀವನವೊಂದೇ ಇದಕ್ಕೆ ಇರುವ ಏಕೈಕ ಮಾರ್ಗ. ನಮ್ಮ ಶಿಕ್ಷಣ ವ್ಯವಸ್ಥೆ ಮಕ್ಕಳ ಮನಸ್ಸನ್ನು ಇಂತಹ ಒಂದು ಸರಳ ಜೀವನಕ್ಕೆ ಸನ್ನದ್ಧಗೊಳಿಸಬೇಕು.

ಅನುಬಂಧ

ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ

ನಮ್ಮ ದೇಶದ ಶೇಕಡ ಎಂಬತ್ತರಷ್ಟು ಮಕ್ಕಳು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲೇ ಕಲಿಯುತ್ತಾರೆ. ವ್ಯವಸ್ಥೆ ದೊಡ್ಡದಾದಷ್ಟೂ ಅಲ್ಲಿ ಯಾಂತ್ರಿಕತೆ ಪ್ರವೇಶಿಸುತ್ತದೆ. ಹಾಗಾಗಿ ಶಿಕ್ಷಣದ ಗುಣಾತ್ಮಕತೆ ನೇಪಥ್ಯಕ್ಕೆ ಸರಿಯುತ್ತದೆ. ಇದನ್ನು ಮನಗಂಡ ಶಿಕ್ಷಣತಜ್ಞರು, ಶಿಕ್ಷಣಾಸಕ್ತರು ಆಯ್ದ ಕೆಲವು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪ್ರಯತ್ನಿಸಿದ್ದಾರೆ. ಏಕಲವ್ಯ ಇಂತಹ ಒಂದು ಪ್ರಯತ್ನ, ದಿಗಂತರ್ ಶಾಲೆ ಅಥವಾ ವಿಜ್ಞಾನಾಶ್ರಮಗಳ ಪ್ರಯತ್ನ ಉತ್ತರಭಾರತದಲ್ಲಿ ನಡೆದಿವೆ. ಈ ಪ್ರಯತ್ನಗಳ ಪರಿಣಾಮವನ್ನು ತಿಳಿಯಲು ಅನೇಕ ಅಧ್ಯಯನಗಳೂ ನಡೆದಿವೆ. ದುರದೃಷ್ಟ ಎಂದರೆ ಈ ಪ್ರಯತ್ನಗಳು ಸರ್ಕಾರಿ ಶಾಲೆಗಳಲ್ಲಿ ನಿರಂತರವಾದ ಶೈಕ್ಷಣಿಕ ಗುಣಮಟ್ಟವನ್ನು ಅನುಷ್ಠಾನಕ್ಕೆ ತರಲು ವಿಫಲವಾಗಿವೆ. ಎಲ್ಲಿಯವರೆಗೆ ಸರ್ಕಾರಿ ಶಾಲೆಗಳ ಜೊತೆ ಈ ಸ್ವಯಂಸೇವಾ ಸಂಸ್ಥೆಗಳು ಕೆಲಸ ಮಾಡುತ್ತವೆಯೋ ಅಲ್ಲಿಯವರೆಗೆ ಈ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಎಂದರೆ ಮುಖ್ಯವಾಗಿ ಚಟುವಟಿಕೆಯಾಧಾರಿತ ಶಿಕ್ಷಣ ನಡೆಯುತ್ತದೆ. ಈ ಸ್ವಯಂಸೇವಾ ಸಂಸ್ಥೆಗಳು ಹಿಂದೆ ಸರಿದ ಕೂಡಲೇ ಸರ್ಕಾರಿ ಶಾಲೆಗಳು ತಮ್ಮ ಮೊದಲಿನ ಸ್ಥಿತಿಗೆ ಹಿಂತಿರುಗುವುದನ್ನು ಈ ಅಧ್ಯಯನಗಳು ತೋರಿಸಿವೆ.

ನಮ್ಮ ದೀನಬಂಧು ಸಂಸ್ಥೆಯ ವತಿಯಿಂದ ಚಾಮರಾಜನಗರದಲ್ಲಿ ಆಯ್ದ ಮೂವತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳೊಡನೆ ಕಳೆದ ಒಂದು ದಶಕದಿಂದಲೂ ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸಲು, ತರಗತಿಯ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ. ಈ ಪ್ರಯತ್ನದ ಫಲವಾಗಿ ನಮ್ಮ ಸರ್ಕಾರಿ ಶಾಲಾ ಅಧ್ಯಾಪಕರು ಶಿಕ್ಷಣದಲ್ಲಿ ಗುಣಮಟ್ಟ ಎಂಬುದು ಬಹಳ ಮುಖ್ಯ, ಗುಣಮಟ್ಟವಿಲ್ಲದ ಯಾಂತ್ರಿಕ ಶಿಕ್ಷಣದಿಂದ ಏನೂ ಪ್ರಯೋಜನವಿಲ್ಲ ಎಂಬ ಗಾಢನಂಬಿಕೆಯನ್ನು ಪಡೆದಿದ್ದಾರೆ. ಆಯ್ದ ಈ ಎಲ್ಲ ಶಾಲೆಗಳಲ್ಲೂ ಚಟುವಟಿಕೆ ಆಧಾರಿತ ಬೋಧನೆ ನಡೆಯುತ್ತಿದೆ. ಈಗಾಗಲೇ ನಡೆದಿರುವ ಇಂತಹ ಪ್ರಯೋಗಗಳು ಗುಣಾತ್ಮಕವಾಗಿ ಶಾಶ್ವತ ಬದಲಾವಣೆಗಳನ್ನು ಮಾಡಲು ಸೋತಿರುವುದರಿಂದ ನಾವು ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಶಾಶ್ವತವಾಗಿ ನೆಲೆ ನಿಲ್ಲಲು ಏನು ಮಾಡಬಹುದೆಂದೂ, ಹೇಗೆ ಮಾಡಬಹುದೆಂದೂ ಆಲೋಚಿಸಿ ಕೆಲಸ ಮಾಡುತ್ತಿದ್ದೇವೆ.

ಶಿಕ್ಷಣ ಎಂಬುದು ಮಗುವಿಗೆ ಅನುಭವದ ಕಲಿಕೆಯಾಗಬೇಕಾದರೆ ಚಟುವಟಿಕೆ ಆಧಾರಿತ ಬೋಧನೆ ನಡೆಯಲೇಬೇಕು. ಸರ್ಕಾರದ ವಲಯಗಳಲ್ಲೂ ಚಟುವಟಿಕೆ

ಆಧಾರಿತ ಬೋಧನೆಗೆ ಸಾಕಷ್ಟು ಒತ್ತು ಕೊಡಲಾಗುತ್ತಿದೆ. ಆದರೆ ಚಟುವಟಿಕೆ ಆಧಾರಿತ ಬೋಧನೆ ಎಂದ ಕೂಡಲೇ ಶಾಲಾ ಶಿಕ್ಷಕರು ಅಸಂಬದ್ಧವಾದ ಚಟುವಟಿಕೆಗಳಲ್ಲಿ ತೊಡಗುವುದನ್ನು ಅನೇಕ ಶಾಲೆಗಳಲ್ಲಿ ಕಾಣಬಹುದು. ಅಧ್ಯಾಪಕ ಕೈಗೊಳ್ಳುವ ಚಟುವಟಿಕೆಗಳಿಗೂ ಕಲಿಯಬೇಕಾಗಿರುವ ವಿಷಯಕ್ಕೂ ಅನ್ಯೋನ್ಯ ಸಂಬಂಧವಿದ್ದು, ಚಟುವಟಿಕೆಯಿಂದಾಗಿ ಮಗು ಸ್ಪಷ್ಟವಾದ ಜ್ಞಾನವನ್ನು ಪಡೆಯುವಂತಿರಬೇಕು. ಇಂತಹ ಒಂದು ಸಂಬಂಧಗಳ ಸ್ಪಷ್ಟತೆ ಅಧ್ಯಾಪಕನಿಗೆ ಬರಬೇಕಾದರೆ ಅವನಿಗೆ ತರಬೇತಿ ಬೇಕು, ಮಾರ್ಗದರ್ಶನ ಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಪ್ರೋತ್ಸಾಹ ಬೇಕು.

ನಾವು ಕೈಗೊಂಡ ಕಾರ್ಯಕ್ರಮದಲ್ಲಿ ಇವೆಲ್ಲವೂ ಇರುವಂತೆ ಎಚ್ಚರಿಕೆ ವಹಿಸಿದ್ದೇವೆ. ಒಂದು ದಶಕದ ನಮ್ಮ ಪ್ರಯತ್ನದಲ್ಲಿ ಅಧ್ಯಾಪಕರಿಗೂ ನಮಗೂ ವಿಶೇಷವಾದ ಸ್ನೇಹಸಂಬಂಧವೊಂದು ಹುಟ್ಟಿದೆ. ಸಾಮಾನ್ಯವಾಗಿ ಸರ್ಕಾರಿ ಶಾಲಾ ಅಧ್ಯಾಪಕರು ಹೊರಗಿನಿಂದ ಬರುವ ನೆರವನ್ನು ಒಂದು ತೊಂದರೆಯೆಂದು ಭಾವಿಸುವುದೇ ಹೆಚ್ಚು. ಕೆಲವರಂತೂ ತಮ್ಮೊಳಗಿನ ಹುಳುಕುಗಳು ಬಹಿರಂಗವಾದೀತೆಂದು ಹೆದರಿ ಹೊರಗಿನ ನೆರವನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಈ ಎಲ್ಲವನ್ನೂ ಮೊದಲೇ ಊಹಿಸಿ ನಾವು ಸರ್ಕಾರಿ ಶಾಲೆಗಳ ಅಧ್ಯಾಪಕರ ಜೊತೆ ಅನ್ಯೋನ್ಯ ಸಂಬಂಧವನ್ನು ಬೆಳೆಸಿಕೊಂಡಿದ್ದೇವೆ. ನಮ್ಮ ಯಶಸ್ಸಿನ ಗುಟ್ಟು ಹೀಗಿದೆ.

- ಮೊದಲನೆಯದಾಗಿ ಅಧ್ಯಾಪಕರಲ್ಲಿ ಈಗಾಗಲೇ ಇರುವ ಇತ್ಯಾತ್ಮಕ ಅಂಶಗಳನ್ನು, ಜ್ಞಾನವನ್ನು ಗುರುತಿಸಿ ಅಧ್ಯಾಪಕನಿಗೆ ತನ್ನಲ್ಲೇ ತನಗೆ ಆತ್ಮವಿಶ್ವಾಸ ಮೂಡುವಂತೆ ನಾವು ನಡೆದುಕೊಳ್ಳುತ್ತೇವೆ. ಲೋಟದ ಅರ್ಧಭಾಗ ಮಾತ್ರ ನೀರು ತುಂಬಿದೆ ಎಂದು ಇಟ್ಟುಕೊಳ್ಳಿ. ಆಗ 'ಅರ್ಧಕ್ಕರ್ಧ ಖಾಲಿಯೇ ಇದೆ' ಎಂದು ಹೀಗಳೆಯಬಹುದು. ಅಥವಾ 'ಓ, ಈಗಾಗಲೇ ಲೋಟ ಅರ್ಧ ತುಂಬಿದೆ' ಎಂದು ಪ್ರೋತ್ಸಾಹದಾಯಕವಾಗಿಯೂ ಹೇಳಬಹುದು. ಹೀಗೆ ಹೇಳಿದುದರ ಅರ್ಥ ಒಂದೇ ಆದರೂ ಪರಿಣಾಮದಲ್ಲಿ ವ್ಯತ್ಯಾಸವಿದೆ ಎಂದು ಗಮನಿಸಬೇಕು. ನಮ್ಮ ಇತ್ಯಾತ್ಮಕ ವಿಧಾನ ಅಧ್ಯಾಪಕರಲ್ಲಿ ಆತ್ಮವಿಶ್ವಾಸವನ್ನೂ ಮತ್ತು ಪ್ರಗತಿ ಸಾಧಿಸಬೇಕೆಂಬ ಉತ್ಸಾಹವನ್ನೂ ತುಂಬಿದೆ.
- ನಮ್ಮ ಪ್ರಯತ್ನಗಳು ಸಫಲವಾಗಬೇಕಾದರೆ ಅಧ್ಯಾಪಕರು ನೆರವು ನೀಡುವ ನಮ್ಮನ್ನು ಹೃತ್ಪೂರ್ವಕವಾಗಿ ಅಂಗೀಕರಿಸಬೇಕು. ಹೀಗೆ ಅವರು ನಮ್ಮನ್ನು ಸ್ವೀಕರಿಸಬೇಕಾದರೆ ನಾವು ನಮ್ಮ ಅಹಂಕಾರವನ್ನು ಬದಿಗಿಟ್ಟು, ಯಾವ ಸಂದರ್ಭದಲ್ಲೂ 'ನಾನು ನಿನಗಿಂತ ಹೆಚ್ಚು' ಎಂದು ತೋರಿಸಿಕೊಳ್ಳದೆ ಅತ್ಯಂತ ಸಂಯಮದಿಂದ ಅಧ್ಯಾಪಕನಿಗೆ ನಿರಂತರ ನೆರವನ್ನು ನೀಡಬೇಕು. ಇದು ಹೇಗಿರಬೇಕು ಎಂದರೆ ಡಾಕ್ಟರ್ ಅರಿವಳಿಕೆ ಮದ್ದುಕೊಟ್ಟು ಶಸ್ತ್ರಚಿಕಿತ್ಸೆ ಮಾಡಿ

ರೋಗ ಗುಣಪಡಿಸುವಂತಿರಬೇಕು. ಇಂತಹ ಒಂದು ಪ್ರಕ್ರಿಯೆ ಸ್ವಲ್ಪಕಾಲ ನಡೆದ ಮೇಲೆ ಅಧ್ಯಾಪಕರು ನಮ್ಮನ್ನು ಪ್ರೀತಿಸಲು ಪ್ರಾರಂಭಿಸುತ್ತಾರೆ, ಹೃತ್ಪೂರ್ವಕವಾಗಿ ಸ್ವೀಕರಿಸುತ್ತಾರೆ. ಜೊತೆಗೆ ಯಾವ ಗುಣಮಟ್ಟದ ಶಿಕ್ಷಣ ಮುಖ್ಯವೆಂದು ನಾವು ಭಾವಿಸುತ್ತೇವೆಯೋ ಅದನ್ನು ಈ ಅಧ್ಯಾಪಕರು ಸಹ ಮುಖ್ಯವೆಂದು ಭಾವಿಸತೊಡಗುತ್ತಾರೆ.

- ಹೀಗೆ ಸುದೀರ್ಘಕಾಲದ ನೆರವಿನಿಂದ ನಾವು ಸಾಧಿಸಿದ ಗುಣಮಟ್ಟದ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಶಾಶ್ವತವಾಗಿ ಮುಂದುವರೆಯಲು ಸಾಧ್ಯವೇ? ಇದೊಂದು ಬಹಳ ಮುಖ್ಯವಾದ ಪ್ರಶ್ನೆ. ಕೇವಲ ವ್ಯಕ್ತಿಗಳಲ್ಲಿ ಮಾತ್ರ ನಾವು ಬದಲಾವಣೆಯನ್ನು ತಂದರೆ ಈ ಬದಲಾವಣೆ ಆಯಾ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಒಂದು ನಿರ್ದಿಷ್ಟ ಪ್ರದೇಶದ ಇಡೀ ವ್ಯವಸ್ಥೆಯಲ್ಲೇ ಮೂಲಭೂತ ಬದಲಾವಣೆಗಳನ್ನು ತಂದರೆ ಆಗ ಈ ಭಾಗದ ವ್ಯವಸ್ಥೆ ತನ್ನದೇ ಸಂಸ್ಕೃತಿಯನ್ನು ಬೆಳೆಸಿಕೊಳ್ಳುತ್ತದೆ ಮತ್ತು ಆ ಸಂಸ್ಕೃತಿಗನುಗುಣವಾಗಿ ಮುಂದುವರಿಯುತ್ತದೆ. ಇದನ್ನು ಪೂರ್ವಭಾವಿಯಾಗಿ ಆಲೋಚಿಸಿ ಇಂತಹ ಒಂದು ಬದಲಾವಣೆಯ ಪ್ರಯತ್ನವನ್ನು ನಾವು ಕೈಗೊಂಡೆವು.
- ನಮ್ಮ ಈ ಪ್ರಯತ್ನಕ್ಕೆ ಒಂದು ಸೈದ್ಧಾಂತಿಕ ನೆಲೆಯಿದೆ. ಏನೆಂದರೆ ಅಧ್ಯಾಪಕರು ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಪಟ್ಟ ಚಟುವಟಿಕೆ ಆಧಾರಿತ ಬೋಧನೆಯನ್ನು ಎಡೆಬಿಡದೆ ಕೈಗೊಳ್ಳುವಂತಹ ಒಂದು ವಾತಾವರಣವನ್ನು ಸೃಷ್ಟಿಸುವುದು. ಹೀಗೆ ನಿರಂತರವಾಗಿ ಈ ಪ್ರದೇಶದ ಎಲ್ಲ ಶಿಕ್ಷಕರು ಚಟುವಟಿಕೆ ಆಧಾರಿತ ಬೋಧನೆಯನ್ನು ತಮ್ಮ ಬೋಧನಾ ವಿಧಾನವಾಗಿ ಅಳವಡಿಸಿಕೊಂಡರೆ ಇದು ಒಂದು ಅಭ್ಯಾಸವಾಗಿ ಪರಿಣಮಿಸುತ್ತದೆ. ಈ ಅಭ್ಯಾಸವನ್ನು ಕೆಲಕಾಲ ಜೀವಂತವಾಗಿಟ್ಟುಕೊಂಡರೆ ಇದರಿಂದ ವೈಯಕ್ತಿಕ ನೆಲೆಗಳಲ್ಲಿ ಎಲ್ಲಾ ಅಧ್ಯಾಪಕರು ಒಂದು 'ಗುಣ' (Character)ವನ್ನು ಬೆಳೆಸಿಕೊಳ್ಳುತ್ತಾರೆ. ಹೀಗೆ ಒಂದು ನಿರ್ದಿಷ್ಟ ಗುಣವುಳ್ಳ ವ್ಯಕ್ತಿಗಳ ಸಮೂಹವೇ ಸಂಸ್ಕೃತಿಯಾಗುತ್ತದೆ. ಹೀಗೆ ಒಂದು ಶಿಕ್ಷಣಸಂಸ್ಕೃತಿಯೊಂದು ರೂಪುಗೊಂಡರೆ ಅದು ತಾನೇ ತಾನಾಗಿ ಮುಂದುವರಿಯುತ್ತದೆ. ನಾವು ಇಂತಹ ಒಂದು ಸಂಸ್ಕೃತಿಯ ಸ್ಥೂಲ ರೂಪರೇಖೆಗಳನ್ನು ಈಗಾಗಲೇ ನಮ್ಮ ಪ್ರದೇಶದಲ್ಲಿ ಕಾಣಲಾರಂಭಿಸಿದ್ದೇವೆ. ಬದಲಾದ ಈ ಪರಿಸರದಿಂದ ಒಬ್ಬರೋ ಇಬ್ಬರೋ ಅಧ್ಯಾಪಕರು ವರ್ಗವಾಗಿ ಹೋದರೂ ಹೊಸದಾಗಿ ಬಂದ ಅಧ್ಯಾಪಕರು ಪ್ರಚಲಿತವಿರುವ ಶಿಕ್ಷಣ ಸಂಸ್ಕೃತಿಯನ್ನು ತಾವೇ ತಾವಾಗಿ ಮೈಗೂಡಿಸಿಕೊಳ್ಳುತ್ತಾರೆ.

ಮೇಲೆ ಸಂಗ್ರಹವಾಗಿ ಹೇಳಿದ ಬದಲಾವಣೆಯ ಸರಣಿಯನ್ನು ಸುಲಭವಾಗಿ ಸಾಧಿಸಲು ಸಾಧ್ಯವಿಲ್ಲ. ಆದರೆ ಪ್ರತಿಯೊಂದೂ ಹಂತದಲ್ಲಿ ಸ್ವಯಂಸೇವಾ ಕಾರ್ಯಕರ್ತರು

ಉತ್ಸಾಹ ಕಳೆದುಕೊಳ್ಳದೆ ನಿರಂತರವಾಗಿ ಕೆಲಸ ಮಾಡಿದರೆ ಇಡೀ ಶಿಕ್ಷಣ ವ್ಯವಸ್ಥೆ ನಮ್ಮೊಡನೆ ಕೈಜೋಡಿಸುತ್ತದೆ. ಇದು ನಮ್ಮ ಅನುಭವ ಕೂಡ. ಕಳೆದ ಒಂದು ದಶಕದಲ್ಲಿ ಡಯೆಟ್ ಆಗಿರಬಹುದು ಅಥವಾ ಡಿಡಿಪಿಐ ಅವರ ಇಲಾಖೆಯಾಗಿರಬಹುದು – ಈ ಎಲ್ಲವೂ ನಮ್ಮೊಡನೆ ಅತ್ಯಂತ ನಿಕಟವಾಗಿ ಸ್ನೇಹದಿಂದ ವರ್ತಿಸುತ್ತಿವೆ. ಮುಖ್ಯವಾಗಿ ಎಲ್ಲಾ ಸರ್ಕಾರಿ ಅಧಿಕಾರಿಗಳೂ ಸಹ ಅಹಂ ಇಲ್ಲದ ಪ್ರಾಮಾಣಿಕ ಪ್ರಯತ್ನಗಳಿಗೆ ಸ್ಪಂದಿಸುತ್ತಾರೆ. ಈ ಅಧಿಕಾರಿಗಳನ್ನು ನಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅಷ್ಟೇನೂ ಕಷ್ಟವಲ್ಲ.